# Government of Karnataka

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 446/2023 |

ದಿನಾಂಕ 22-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ಶಶಿಕಲಾ |
| ಗಂಡನ ಹೆಸರು | ಪ್ರಾಣೇಶ |
| ವಯಸ್ಸು | 34 ವರ್ಷ |
| ಉದ್ಯೋಗ | ಬಿ.ಸಿ.ಎಮ್.ಹಾಸ್ಟೇಲ್ ವಾರ್ಡ್‌ನ್ ದೇವದುರ್ಗ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು ಸುಮಾರು 2 ವರೆ ವ ರ್ಷದಿಂದ ಬಿ.ಸಿ.ಎಮ್.ಹಾಸ್ಟೇಲ್ ವಾರ್ಡ್‌ನ್ ದೇವದುರ್ಗ ದಲ್ಲಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ: 21-02-2023 ರಂದು ಬೆಳಿಗ್ಗೆ 6-00 ಗಂಟೆಗೆ ನಾನು ಬಿ ಸಿ ಎಮ್ ಹಾಸ್ಟೇಲ್‌ಗೆ ಕರ್ತವ್ಯಕ್ಕೆ ಬಂದಿದ್ದೇನು. ಕರ್ತವ್ಯ ಮುಗಿಸಿಕೊಂಡು ರಾತ್ರಿ 8-00 ಗಂಟೆಗೆ ಮನೆಕಡೆಗೆ ಬಂದೆನು. ಮರುದಿನ ದಿನಾಂಕ: 22-02-2023 ರಂದು ಬೆಳಿಗ್ಗೆ 3-50 ಗಂಟೆಗೆ ಚಾಸಾ-5 ರವರು ನನಗೆ ಕರೆ ಮಾಡಿ ತಿಳಿಸಿದ್ದೇನೆಂದರೆ, ರಾತ್ರಿ 12-50 ಗಂಟೆಯಿಂದ 1-00 ಗಂಟೆಯ ಅವಧಿಯಲ್ಲಿ ವಸತಿನಿಲಯದ ಮುಖ್ಯ ದ್ವಾರಕ್ಕೆ ಹಾಕಿದ ಬೀಗವನ್ನು ಯಾರೋ ಮುರಿದಿದ್ದರು, ನಂತರ ರೇಷನ್ ಕೋಣೆಯ ಬಾಗಿಲಿಗೆ ಹಾಕಿದ ಬೀಗವನ್ನು ಮುರಿದಿದ್ದು ಕಂಡು ಬಂದಿರುತ್ತದೆ ಎಂದು ತಿಳಿಸಿದರು. ನಾವು

ಒಳಗಡೆ ಹೋಗಿ ನೋಡಲಾಗಿ ಅಲ್ಲಿ ಯಾವುದೇ ರೇಷನ್ ಸಾಮಾಗ್ರಿ ಕಳ್ಳತನ ಆಗಿರುವುದಿಲ್ಲ. ವಿದ್ಯಾರ್ಥಿನಿಯರನ್ನು ವಿಚಾರ ಮಾಡಲಾಗಿ, ಯಾವುದೇ ವಸ್ತುಗಳು ಕಳ್ಳತನವಾಗಿರುವುದಿಲ್ಲ ಎಂದು ತಿಳಿಸಿದರು. ಮತ್ತೆ ಈ ರೀತಿ ಘಟನೆಯಾಗಬಾರದೆಂದು ಮೇಲಾಧಿಕಾರಿಗಳಿಗೆ ತಿಳಿಸಿ, ಅವರ ಅನುಮತಿ ಮೇರೆಗೆ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿರುತ್ತಾರೆ ದೂರನ್ನು ನಿ ಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಈ ಘಟನೆಯು ನಮ್ಮ ಕೊಠಡಿಗೆ ಹಾಕಿದ ಸಿಸಿಟಿವಿ ಕ್ಯಾಮರದಲ್ಲಿ ಸೆರೆಯಾಗಿರುತ್ತದೆ. ಘಟನೆಯಾದ ನಂತರ ಪೋಲಿಸರು ವಸತಿನಿಲಯಕ್ಕೆ ಬಂದು ಪಂಚನಾಮೆಯನ್ನು ಮಾಡಿ ಒಂದು ಕಬ್ಬಿಣದ ರಾಡನ್ನು ವಶಪಡಿಸಿಕೊಂಡರು ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಸಹಿ ಮಾಡುವ ಕಾಲಕ್ಕೆ ಚಾಸಾ-5 ಗಂಗಮ್ಮ ಇದ್ದರು. ಕಬ್ಬಿಣದ ರಾಡನ್ನು ಪೋಲಿಸರು ಜಮಾ ಮಾಡದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 446/2023 |

ದಿನಾಂಕ 22-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 2 ಪ್ರಾಸಾಃ 2

| | |
|---|---|
| ಹೆಸರು | ಸಂಗಾರಡ್ಡಿ |
| ತಂದೆಯ ಹೆಸರು | ಮಲ್ಲೇಶಿ |
| ವಯಸ್ಸು | 25 ವರ್ಷ |
| ಉದ್ಯೋಗ | ಐಸಿಐಸಿಐ ಬ್ಯಾಂಕ್‌ನಲ್ಲಿ ನೌಕರಿ |
| ವಾಸಸ್ಥಳ | ಕುರ್ಕಿಹಳ್ಳಿ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಚಾಸಾ-1 ರವರ ಪರಿಚಯ ನನಗೆ ಇರುತ್ತದೆ. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ:ಪಿ-2 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ:ಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ: 03-03-2023 ರಂದು ಮದ್ಯಹ್ನಾ 3-30 ಗಂಟೆಗೆ ಎಜುಕೇಶನ್ ಲೇಔಟ್ ನ ಡಿ ದೇವರಾಜ ಅರಸು ವಸತಿನಿಲಯದಲ್ಲಿ ಮಾಡಿರುತ್ತೇನೆ. ಮಹಜರನ್ನು ಕಳ್ಳತನ ಮಾಡಿದ್ದಾರೆಂದು ಹೇಳಿ ಮಾಡಿರುತ್ತಾರೆ. ಸ್ಥಳದಲ್ಲಿ ಕಬ್ಬಿಣದ ರಾಡ ಇತ್ತು. ನನ್ನ ಜೊತೆ ಸಹಿ ಮಾಡುವಾಗ ಚಾಸಾ-3 ರವರು ಇದ್ದರು. ಕಬ್ಬಿಣದ ರಾಡನ್ನು ಪೋಲಿಸರು ವಶಪಡಿಸಿಕೊಂಡರು ಅದನ್ನು ನೋಡಿದರೆ ಗುರುತಿಸುತ್ತೇನೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

ಕಬ್ಬಿಣದ ರಾಡನ್ನು ಜಮಾ ಮಾಡದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 446/2023 |

ದಿನಾಂಕ 22-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 3 ಪ್ರಾಸಾಃ 3

| | |
|---|---|
| ಹೆಸರು | ಮಲ್ಲಿಕಾರ್ಜುನ |
| ತಂದೆಯ ಹೆಸರು | ದಂಡಪ್ಪ ವಡಿಗೇರಿ |
| ವಯಸ್ಸು | 24 ವರ್ಷ |
| ಉದ್ಯೋಗ | ಐಸಿಐಸಿಐ ಬ್ಯಾಂಕ್‌ನಲ್ಲಿ ನೌಕರಿ |
| ವಾಸಸ್ಥಳ | ನಾಗರಹಾಳ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಚಾಸಾ-2 ರವರ ಪರಿಚಯ ನನಗೆ ಇರುತ್ತದೆ. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರತಿಸಿದ್ದು, ಅದನ್ನು ಈಗಾಗಲೇ ನಿ:ಪಿ-2 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ:ಪಿ-2(ಬಿ ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ: 03-03-2023 ರಂದು ಮಧ್ಯಹ್ನಾ 2-30 ರಿಂದ 3-30 ಗಂಟೆಗೆ ಎಜುಕೇಶನ್ ಲೇಔಟ್ ನ ಡಿ ದೇವರಾಜ ಅರಸು ವಸತಿನಿಲಯದಲ್ಲಿ ಮಾಡಿರುತ್ತೇನೆ. ಮಹಜರನ್ನು ಕಳ್ಳತನ ಮಾಡಿದ್ದಾರೆಂದು ಹೇಳಿ ಮಾಡಿರುತ್ತಾರೆ. ಸ್ಥಳದಲ್ಲಿ ಕಬ್ಬಿಣದ ರಾಡ ಇತ್ತು. ನನ್ನ ಜೊತೆ ಸಹಿ ಮಾಡುವಾಗ ಚಾಸಾ-3 ರವರು ಇದ್ದರು. ಕಬ್ಬಿಣದ ರಾಡನ್ನು ಪೋಲಿಸರು ವಶಪಡಿಸಿಕೊಂಡರು ಅದನ್ನು ನೋಡಿದರೆ ಗುರುತಿಸುತ್ತೇನೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

ಕಬ್ಬಿಣದ ರಾಡನ್ನು ಜಮಾ ಮಾಡದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ